ಅಧ್ಯಕ್ಷರು : ಪ್ರಶ್ನೋತ್ತರ ವೇಳೆಯಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಎಲ್ಲಿದೆ?

ಶ್ರೀ ಬಿ.ಸಿ.ಪಾಟೀಲ್ : ನಾನು ಅವರಿಗೆ ವಿರೋಧ ಹೇಳುವುದಿಲ್ಲ. ಈ ಸಮಸ್ಯೆಗೆ ಪರಿಹಾರ ಕೊಡಬೇಕು ಎನ್ನುವ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಈಗೇನಾಗಿದೆ, ಕೆಲವು ಕಡೆ ತಪ್ಪಾಗಿದೆ. ಬಹಳಷ್ಟು ಜನ ಹಿಂದೆ ಕೆಲವು ಅಧಿಕಾರಿಗಳು ರೈತರ ಜೊತೆಗೆ ಶಾಮೀಲಾಗಿ ತಪ್ಪು JMIC ಬರೆದು ಹೆಚ್ಚಿಗೆ ಪರಿಹಾರ ಕೊಡಿಸಿದ್ದಾರೆ. ಆಗ ಏನಾಗಿದೆ ಎಂದರೆ, ಪಕ್ಕದ ರೈತರ ಕಣ್ಣು ಕೆಂಪಾಗುತ್ತದೆ ಆ ಹೊಲದಲ್ಲಿ ಏನೂ ಇಲ್ಲದವನಿಗೆ ಪರಿಹಾರ ಕೊಟ್ಟರು, ನನಗೆ ಇಲ್ಲವಲ್ಲ ಎಂದು ಅವರ ಕಣ್ಣು ಕೆಂಪಾಗುತ್ತದೆ. ಅದಕ್ಕೆ. ಅಧಿಕಾರಿಗಳು ಯಾರು ಇದ್ದಾರೆ, ಅವರ ಮೇಲೆ ನೀವು ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಿ.

ಶ್ರೀ ಬಸವರಾಜ್ ಬೊಮ್ಮಾಯಿ : ಬಹಳ ಸ್ಪಷ್ಟವಾಗಿ ನಾನು ಈಗಾಗಲೇ ಹೇಳಿದ್ದೇನೆ. ಯಾವ ಅಧಿಕಾರಿಗಳು ಶಾಮೀಲಾಗಿದ್ದಾರೆ, ಅವರ ಮೇಲೆ ಕಮ ತೆಗೆದುಕೊಳ್ಳುತ್ತೇನೆ ಮತ್ತು ಯಾರು false claim ಮಾಡಿದ್ದಾರೆ, ಅವರ ಮೇಲೂ ಕಮ ತೆಗೆದುಕೊಳ್ಳುತ್ತೇನೆ. ಅಲ್ಲಿಗೆ ಅಧಿಕಾರಿಗಳನ್ನು ತಕ್ಷಣ ಹಾಕುತ್ತಿದ್ದೇವೆ. ಮತ್ತು ನಾವು ಕೂಡ ಅವರ ಸಹಕಾರದಿಂದ ಈ ಸಮಸ್ಯೆಯನ್ನು ಬಗೆಹರಿಸುತ್ತೇವೆ.

ಶ್ರೀ ಬಿ.ಸಿ.ಪಾಟೀಲ್: ಆದಷ್ಟು ಬೇಗನೆ ಅಧಿಕಾರಿಗಳನ್ನು ಅಲ್ಲಿಗೆ ಹಾಕಬೇಕು ಮತ್ತು ಹಿನ್ನೀರಿನಿಂದ ಸ್ವಲ್ಪ ಹಣ ಬರುವುದಿದೆ, ಅದನ್ನು ಕೊಡಿಸಿ ಕೊಡಬೇಕು.

ಶ್ರೀ ಬಸವರಾಜ್ ಬೊಮ್ಮಾಯಿ : ಆಯಿತು. ತಕ್ಷಣವೇ ಅಧಿಕಾರಿಗಳನ್ನು ಹಾಕಿ ಕ್ರಮ ತೆಗೆದುಕೊಳ್ಳಲಾಗುವುದು.

ಅರ್ಕಾವತಿ ನದಿ ಪುನಃಶ್ಚೇತನಗೊಳಿಸುವುದು

157(906) ಶ್ರೀ ವಿಶ್ವನಾಥ್ ಎಸ್.ಆರ್. (ಯಲಹಂಕ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅರ್ಕಾವತಿ ನದಿ ಪುನಃಶ್ಚೇತನಗೊಳಿಸಲು ಸರ್ಕಾರವು ಉನ್ನತ ಮಟ್ಟದ ಸಮಿತಿಯನ್ನು ನೇಮಕ ಮಾಡಿದ್ದು, ಸದರಿ ಸಮಿತಿಯು ಕೈಗೊಂಡ ಕ್ರಮಗಳೇನು ;

ಆ) ಕಳೆದ ಆಯವ್ಯಯದಲ್ಲಿ ಸರ್ವೆ ಕಾರ್ಯಕ್ಕಾಗಿ 2 ಕೋಟಿ ರೂ. ಮಂಜೂರು ಮಾಡಿದ್ದು, ಆ ಕಾರ್ಯ ಪೂರ್ಣಗೊಂಡಿರುವುದರಿಂದ ನದಿ ಪುನಃಶ್ಚೇತನ ಕಾಮಗಾರಿ ಮಾಡಲು ಎಷ್ಟು ಕಾಲಾವಕಾಶ ಬೇಕಾಗುತ್ತದೆ ;

ಇ) ಸದರಿ ಕಾಮಗಾರಿಗೆ ತಗಲುವ ಒಟ್ಟು ಮೊತ್ತವೆಷ್ಟು ; ಈ ಕಾಮಗಾರಿಗೆ ಎಷ್ಟು ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು (ಪೂರ್ಣ ಪ್ರಮಾಣದ ಮಾಹಿತಿಯನ್ನು ನೀಡುವುದು) ?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ದಿನಾಂಕ: 13–01–2010 ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ತಿಪ್ಪಗೊಂಡನಹಳ್ಳಿ ಜಲಾಶಯದ ಒಳಹರಿವು ಹೆಚ್ಚಿಸುವ ನಿಟ್ಟಿನಲ್ಲಿ ಅರ್ಕಾವತಿ ನದಿ ಪುನಃಶ್ಚೇತನಕ್ಕಾಗಿ ಒಂದು ಸಮಿತಿಯನ್ನು ರಚಿಸಲಾಗಿದ್ದು, ವಿವಿಧ ಇಲಾಖೆಗಳಾದ ಜಲ ಸಂಪನ್ಮೂಲ ಇಲಾಖೆ, ಸಣ್ಣ ನೀರಾವರಿ ಇಲಾಖೆ, ಕಂದಾಯ ಇಲಾಖೆ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸಮನ್ವಯದೊಂದಿಗೆ ಕ್ರಮ ಕೈಗೊಳ್ಳಲಾಗುತ್ತಿದ್ದು, ಸರ್ವೆ ಕಾರ್ಯ ಕೈಗೊಳ್ಳಲಾಗಿದೆ.

ಆ) 2009–10ನೇ ಸಾಲಿನಲ್ಲಿ ಸರ್ಕಾರವು ಯೋಜನಾ ವರದಿ ತಯಾರಿಸಲು ರೂ. 2.00 ಕೋಟಿಗಳ ಅನುದಾನವನ್ನು ಒದಗಿಸಿದ್ದು, ಕಾವೇರಿ ನೀರಾವರಿ ನಿಗಮದ ವತಿಯಿಂದ ಈ ಪುನಃಶ್ಚೇತನ ಕಾರ್ಯದ ಸರ್ವೆ ಕಾರ್ಯ ಮತ್ತು ಡಿ.ಪಿ.ಆರ್. ತಯಾರಿಕೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಜಲಾನಯನ ಪ್ರದೇಶವನ್ನು ಮೂರು ಉಪ–ಜಲಾನಯನ ಪ್ರದೇಶಗಳನ್ನಾಗಿ ವಿಂಗಡಿಸಿ, ರಿಮೋಟ್ ಸೆನ್ಸಿಂಗ್ ತಂತ್ರಜ್ಞಾನದ ಮೂಲಕ ಪ್ರಾಥಮಿಕ ಸರ್ವೆಯನ್ನು ಪೂರ್ಣಗೊಳಿಸಿ, ಪ್ರಾಥಮಿಕ ತಾಂತ್ರಿಕ ವರದಿಯನ್ನು (Preliminary technical report) ಸರ್ಕಾರದಲ್ಲಿ ಸ್ವೀಕೃತವಾಗಿದ್ದು, ಮುಂದಿನ ಕ್ರಮಕ್ಕಾಗಿ ನಗರಾಭಿವೃದ್ಧಿ ಇಲಾಖೆಗೆ ಕಳುಹಿಸಲಾಗಿದೆ. ಇಂಜಿನಿಯರಿಂಗ್ ಸರ್ವೆ ಕಾರ್ಯವನ್ನು ಸಹ ಕೈಗೊಂಡಿದ್ದು, ಮೊದಲನೇ ಹಂತ – ಹೆಸರಘಟ್ಟ ಜಲಾನಯನ ಪ್ರದೇಶ ಹಾಗೂ ಎರಡನೇ ಹಂತ – ಕುಮುದ್ವತಿ ಜಲಾನಯನ ಪ್ರದೇಶಗಳ ಸರ್ವೆ

ಪೂರ್ಣಗೊಂಡಿದೆ. ಮೊದಲನೆ ಹಂತದ ರೂ. 8.10 ಕೋಟಿ ಮೊತ್ತದ ಯೋಜನಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ನಗರಾಭಿವೃದ್ಧಿ ಇಲಾಖೆಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ. ಎರಡನೇ ಹಂತದ ರೂ. 7.85 ಕೋಟಿ ಮೊತ್ತದ ಯೋಜನಾ ವರದಿಯು ತಯಾರಿಕೆ ಹಂತದಲ್ಲಿದೆ. ಮೂರನೇ ಹಂತ – ಹೆಸರಘಟ್ಟ ಜಲಾಶಯದಿಂದ ತಿಪ್ಪಗೊಂಡನಹಳ್ಳಿ ಜಲಾಶಯದವರೆಗಿನ ಅರ್ಕಾವತಿ ಜಲಾನಯನ ಪ್ರದೇಶದ ಸರ್ವೆ ಕಾರ್ಯ ಹಾಗೂ ಯೋಜನಾ ವರದಿ ತಯಾರಿಕೆ ಪ್ರಗತಿಯಲ್ಲಿದೆ.

ಸರ್ವೆ ಕಾರ್ಯ ಹಾಗೂ ಯೋಜನಾ ವರದಿ ತಯಾರಿಸುವ ಕಾರ್ಯ ಪೂರ್ಣಗೊಂಡ ನಂತರ ಯೋಜನೆಯ ಅನುಷ್ಠಾನಕ್ಕೆ ಕಾಲಾವಧಿ ನಿಗಧಿಪಡಿಸಲಾಗುವುದು.

ಇ) ಮೊದಲನೇ ಹಂತ ಮತ್ತು ಎರಡನೇ ಹಂತಕ್ಕೆ ತಗಲುವ ರೂ.15.95 ಕೋಟಿ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಿ 2011–12 ರಲ್ಲಿ ಕಾಮಗಾರಿಯನ್ನು ಅನುಷ್ಠಾನಗೊಳಿಸಲಾಗುವುದು. ಕಾವೇರಿ ನೀರಾವರಿ ನಿಗಮದ ಆಯವ್ಯಯದಲ್ಲಿ ಈ ಮೊತ್ತವನ್ನು ನಿಗಧಿಪಡಿಸಲಾಗುವುದು. ಮೂರನೇ ಹಂತದ ಯೋಜನಾ ವರದಿ ಸಿದ್ದವಾದ ಮೇಲೆ ಅನುಷ್ಠಾನಗೊಳಿಸಲು ಎಲ್ಲಾ ಆಡಳಿತಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗುವುದು.

ಶ್ರೀ ಎಸ್.ಆರ್.ವಿಶ್ವನಾಥ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಒದಗಿಸಿದ್ದಾರೆ. ಮೊದಲನೆಯದಾಗಿ, 20 ವರ್ಷಗಳ ಹಿಂದೆ ಬತ್ತಿಹೋದ 190 ಕಿ.ಮೀ.ಉದ್ದವಿರುವ ಅರ್ಕಾವತಿ ನದಿಗೆ ಪುನ:ಶ್ಚೇತನಕ್ಕೆ ಹಾದಿ ಕೊಟ್ಟಂಥ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಜಲ ಸಂಪನ್ಮೂಲ ಸಚಿವರಿಗೆ ಅಭಿನಂದನೆಗಳನ್ನು ಹೇಳುತ್ತೇನೆ. ಈ ನದಿಯ ಒಟ್ಟು ಉದ್ದ 190 ಕಿ.ಮಿ. ನಂದಿ ಬೆಟ್ಟದಿಂದ ಪ್ರಾರಂಭವಾಗಿ ಹೆಸರಘಟ್ಟ, ತಿಪ್ಪಗೊಂಡನಹಳ್ಳಿ, ಮಂಚನಬೆಲೆ, ಅಲ್ಲಿಂದ ಸಂಗಮಕ್ಕೆ ಹೋಗತಕ್ಕಂಥ ನಿರಂತರವಾಗಿ ಹರಿಯತಕ್ಕಂಥ ನದಿ. ಸನ್ಮಾನ್ಯ ಸಚಿವರು ಎರಡು ಹಂತಗಳಲ್ಲಿ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳುತ್ತೇವೆಂದು ಹೇಳಿದ್ದಾರೆ. ಮೊದಲನೆ ಹಂತ ನಂದಿಬೆಟ್ಟದಿಂದ ಹೆಸರಘಟ್ಟ ಕೆರೆಯವರೆಗೆ. ಎರಡನೆಯದು, ಕುಮುದ್ವತಿ ನದಿಯವರೆಗೆ. ಅದು ನೆಲಮಂಗಲದ ಭಾಗದಿಂದ ಹರಿದು

ತಿಪ್ಪಗೊಂಡನಹಳ್ಳಿಗೆ ಹೋಗತಕ್ಕಂಥ ನದಿ ಬೇರೆ ನದಿ. ನಾನು ಅವರಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, 190 ಕಿ.ಮಿ.ಇರುವಂಥ stretch ನಲ್ಲಿ 150 ದೊಡ್ಡ ಕೆರೆಗಳು ಮತ್ತು 1084 ಸಣ್ಣ ಕೆರೆಗಳು ಬರುತ್ತವೆ ಮತ್ತು ನಾಲ್ಕು ಜಲಾಶಯಗಳು ಹಾಗೂ ಒಂದು ಫಾಲ್ಸ್ ಬರುತ್ತಿತ್ತು. ಈಗ ಕೊಟ್ಟಿರುವ ಎಂಟು ಕೋಟಿ ಒಂದು ಲಕ್ಷದ ಅನುದಾನ, ಇದು ಮೊದಲನೆ ಹಂತದ ಕಾಮಗಾರಿಗೆ ಯಾವುದೇ ಕಾರಣದಿಂದಲೂ ಸಾಲುವುದಿಲ್ಲ. ಏಕೆಂದರೆ, ಈ ನದಿ ಪುನ:ಶ್ಚೇತನಕ್ಕೆ ಬಹಳ ತೀವ್ರವಾದಂಥ ಚಾಲನೆ ಕೊಡಬೇಕು. ಇದು ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಹಾಯ್ದು ಹೋಗತಕ್ಕಂಥ ನದಿ. ಬೆಂಗಳೂರಿಗೆ ಮೊದಲನೆಯದಾಗಿ ನೀರನ್ನು ಕೊಟ್ಟಂಥ ನದಿ. ಕಾವೇರಿ ನದಿಯ ನೀರು ಬಂತು ಎಂದಾಕ್ಷಣ ಅರ್ಕಾವತಿ ನದಿಯನ್ನು ಮರೆತಿರುವ ಪರಿಣಾಮವಾಗಿ ಇವತ್ತು ಆ ನದಿ ಸಂಪೂರ್ಣವಾಗಿ ಬತ್ತಿ ಹೋಗಿದೆ. ಅದಕ್ಕೋಸ್ಕರ ತಮ್ಮಲ್ಲಿ ಮನವಿ ಮಾಡುವುದು ಏನೆಂದರೆ, ಇದಕ್ಕೆ ಇನ್ನೂ ಹೆಚ್ಚಿನ ಅನುದಾನ ಕೊಡಬೇಕು. ಎರಡನೆಯದಾಗಿ, ಹೆಸರಘಟ್ಟ ಕೆರೆಯಿಂದ ತಿಪ್ಪಗೊಂಡನಹಳ್ಳಿ ಕೆರೆಯವರೆಗೆ ಸಂರಕ್ಷಿತ ಪ್ರದೇಶವೆಂದು ನದಿಯ ಎರಡೂ ಭಾಗದಲ್ಲಿ ಒಂದು ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ಕಟ್ಟಡ ಬರಬಾರದು, ನಿವೇಶನಗಳು ರಚನೆಯಾಗಬಾರದು, ಯಾವುದೇ ಕೊಳಚೆ ನೀರು ಬರಬಾರದು ಎಂದು 2003 ರಲ್ಲಿ ಗೆಜೆಟ್ ಮಾಡಿದ್ದಾರೆ.

ಅಧ್ಯಕ್ಷರು : ಆಯಿತು ಬಿಡಿ. ನೀವು ಪ್ರಶ್ನೆ ಕೇಳದೇ ಇದ್ದರೆ ಹೇಗೆ? Please. ನೀವು ಉತ್ತರಿಸಿ.

ಶ್ರೀ ಎಸ್.ಆರ್.ವಿಶ್ವನಾಥ್ : ಅದೇ ರೀತಿಯಾಗಿ ನಂದಿ ಬೆಟ್ಟದಿಂದ ಹೆಸರಘಟ್ಟ ಕೆರೆಯವರೆಗೆ ಇನ್ನೂ ಗೆಜೆಟ್ ಆಗಿಲ್ಲ. ಈಗಾಗಲೇ ಅಲ್ಲಿ ದೊಡ್ಡ ದೊಡ್ಡ ಕಟ್ಟಡಗಳು ಬರುತ್ತಿವೆ. ಅದನ್ನೂ ಕೂಡ ಸಂರಕ್ಷಿತ ಪ್ರದೇಶವೆಂದು ಗೆಜೆಟ್ ಮಾಡಿ, ಎಷ್ಟು ದಿವಸದೊಳಗೆ ಪ್ರಾರಂಭವಾಗುತ್ತದೆ ಮತ್ತು ಅದಕ್ಕೆ ಅನುದಾನ ಎಷ್ಟು ಬೇಕೋ ಅಷ್ಟನ್ನು ಯಾವುದೇ ರೀತಿಯಿಂದಲೂ ಕೊರತೆಯಾಗದಂತೆ ಅನುದಾನ ಕೊಡಬೇಕೆಂದು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ದಿನೇಶ್ ಗುಂಡೂರಾವ್: ಸನ್ಮಾನ್ಯ ಅಧ್ಯಕ್ಷರೆ, ನಾನೊಂದು ಉಪ ಪ್ರಶ್ನೆ ಕೇಳುತ್ತೇನೆ. ಆನಂತರ ಮಾನ್ಯ ಸಚಿವರು ಒಂದೇ ಸಲ ಉತ್ತರ ಕೊಡಲಿ. ಈ ಒಂದು ಕಾರ್ಯಕ್ರಮ ಮಾಡುತ್ತಿರುವುದಕ್ಕೆ ನಾನು ನಿಜಕ್ಕೂ ಕೂಡ ಸ್ವಾಗತ ಬಯಸುತ್ತೇನೆ. ಇದೊಂದು ಬಹಳ ಒಳ್ಳೆಯ ಕಾರ್ಯಕ್ರಮವಾಗಿದೆ. ಮಾನ್ಯ ವಿಶ್ವನಾಥ್‌ರವರು ಹೇಳಿದಂತೆ ಕಾವೇರಿ ನದಿ ನೀರು ಬಂದಿರುವುದರಿಂದ ಅರ್ಕಾವತಿ ನದಿಯನ್ನು ನಾವು ಮರೆತು ಹೋಗಿದ್ದೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಈ ಒಂದು ಯೋಜನೆಗೆ ದುಡ್ಡು ಬಹಳ ಕಡಿಮೆ ಇದೆ. ಈ ಹಣ ಸಾಕಾಗುವುದಿಲ್ಲ. ಎರಡನೆಯದೇನೆಂದರೆ, ಅಲ್ಲಿ ಈಗಲೂ ಕೂಡ encroachment ಆಗುತ್ತಿದೆ. ಇದು ಇನ್ನೂ ಸಹ ನಿಂತಿಲ್ಲ. ಮತ್ತೆ ಗಣಿಗಾರಿಕೆ ಕೂಡ ಇದೇ ಭಾಗದಲ್ಲಿ ಇವತ್ತೂ ಸಹ ನಡೆಯುತ್ತಿದೆ. ಈ ಯೋಜನೆಯನ್ನು ಸರ್ಕಾರ ಅನುಷ್ಠಾನ ಮಾಡಲಿ. ಆದರೆ, ಈಗ ಆಗಿರುವಂಥ encroachment ಅನ್ನು ಮತ್ತು ಗಣಿಗಾರಿಕೆಯನ್ನು ಕೂಡಲೇ ನಿಲ್ಲಿಸತಕ್ಕಂಥ ಕಾರ್ಯಕ್ರಮವನ್ನು ಮಾಡಬೇಕು. ಇಲ್ಲದಿದ್ದರೆ ಇದು ಇನ್ನು ಹೆಚ್ಚಾಗುತ್ತಾ ಹೋಗುವುದರಿಂದ ಮುಂದಕ್ಕೆ ದೊಡ್ಡ ಸಮಸ್ಯೆಯಾಗುತ್ತದೆ. ಆದ್ದರಿಂದ, ಇದನ್ನು ನಿಲ್ಲಿಸುವುದಕ್ಕೆ ತಾವು ಆದೇಶ ಕೊಡಬೇಕು. ಮತ್ತೊಂದು ಕಡೆ ಅಧಿಕಾರಿಗಳಿಂದ ಅಲ್ಲಿ ಬ್ಲಾಕ್ ಮೇಲ್ ಮಾಡುವ ತಂತ್ರ ಕೂಡ ನಡೆಯುತ್ತಿದೆ. ಯಾವ ರೀತಿಯಾಗಿ ಅಲ್ಲಿ ಅಗುತ್ತಿದೆ ಎಂದರೆ, ನೀವು ಏನಾದರೂ ಹೆಚ್ಚುಕಡಿಮೆ ಮಾಡಿದರೆ encroachment ಅನ್ನು ನಾವು ರಿಮೂವ್ ಮಾಡಿ ಗಣಿಗಾರಿಕೆಯನ್ನು ನಿಲ್ಲಿಸುತ್ತೇವೆಂದು ಬೆದರಿಕೆ ಹಾಕುತ್ತಿದ್ದಾರೆ. ಅಂದರೆ, ಅಲ್ಲಿ ಬೇರೆ ಬೇರೆ ರೀತಿಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ. ಆದ್ದರಿಂದ, ಇದಕ್ಕೆ ಅವಕಾಶ ಕೊಡದೆ ಬಹಳ ಸ್ಟ್ರಿಕ್ಟ್ ಆಗಿ ಮಾಡಬೇಕೆಂದು ಹೇಳುತ್ತೇನೆ. ಮತ್ತೊಂದು ವಿಷಯ ಏನೆಂದರೆ, ಅರ್ಕಾವತಿ ನದಿಯ ಪ್ರಾಧಿಕಾರವನ್ನು ಮಾಡಿದರೆ ಬಹುಶ: ಇದಕ್ಕೆ ಒಂದು ತೀವ್ರತೆ ಬರುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಇದು ಅನುಷ್ಠಾನವಾದರೆ ಮಾನ್ಯ ವಿಶ್ವನಾಥ್‌ರವರಿಗೂ ಸಹ ಅಭಿನಂದನೆ ಸಲ್ಲಿಸುತ್ತೇವೆ. ಇದು ಮಾನ್ಯ ವಿಶ್ವನಾಥ್‌ರವರ ಕಾಲದಲ್ಲಿ ಆಗಲೇ ಬೇಕು. ಇದು ಅನುಷ್ಠಾನವಾದ ಮೇಲೆ ಅವರಿಗೆ ಅಭಿನಂದನೆ ಸಲ್ಲಿಸುತ್ತೇವೆ. ಅಲ್ಲಿಯವರೆಗೂ ಅವರಿಗೆ ಅಭಿನಂದನೆ ಸಲ್ಲಿಸುವುದಕ್ಕೆ ಆಗುವುದಿಲ್ಲ.

ಶ್ರೀ ಬಸವರಾಜ್ ಬೊಮ್ಮಾಯಿ: ಮಾನ್ಯ ಸಭಾಧ್ಯಕ್ಷರೆ, ಅರ್ಕಾವತಿ ನದಿ ನಮ್ಮ ಬೆಂಗಳೂರಿನ ಉತ್ತರ ಭಾಗಕ್ಕೆ ಸಂಪೂರ್ಣವಾಗಿ ನೀರು ಕೊಡತಕ್ಕಂಥ ನದಿಯಾಗಿತ್ತು. ಈ ನದಿ ಪಾತ್ರದಲ್ಲಿ ಬರುವ ತಿಪ್ಪಗೊಂಡನಹಳ್ಳಿ ಮತ್ತು ಹೆಸರಘಟ್ಟ ಜಲಾಶಗಳು ಒಂದು ಮುಖ್ಯ ಫೀಡರ್ ಕೆನಾಲ್ ಎಂದರೆ ತಪ್ಪಾಗಲಾರದು. ಈ ಎರಡು ಕೆರೆಗಳಿಗೆ ದೊಡ್ಡ ಪ್ರಮಾಣದ ನೀರನ್ನು ಈ ನದಿಯಿಂದ ಸಿಗುತ್ತಿತ್ತು. ಮಳೆಯ ಪ್ರಮಾಣ ಕಡಿಮೆಯಾಗಿದ್ದರಿಂದ ಇಲ್ಲಿ ನೀರಿನ ಪ್ರಮಾಣ ಕಡಿಮೆಯಾಗಿದೆ ಎಂದು ಬಹಳಷ್ಟು ಕೂಗಿತ್ತು. ನಾವು ಹಿಂದಿನ ಮಾಹಿತಿಗಳನ್ನು ತೆಗೆದು ನೋಡಿದ್ದೇನೆ. ತಮಗೆಲ್ಲಾ ಗೊತ್ತಿರುವ ಹಾಗೆ 2002–03 ಮತ್ತು 2003–04ರಲ್ಲಿ ಮಳೆ ಕಡಿಮೆಯಾಗಿತ್ತು. ಆದರೆ ಬೇರೆ ಸಂದರ್ಭದಲ್ಲಿ normal rainfall ಬಂದಿದೆ. ಆದರೂ ಕೂಡ ಅರ್ಕಾವತಿ catchments area ದಿಂದ ಮುಖ್ಯ ಅರ್ಕಾವತಿ ನದಿಗೆ ಏನು ನೀರು ಬರಬೇಕಾಗಿತ್ತೋ ಆ ನೀರು ಬರುತ್ತಿಲ್ಲ. ಇದಕ್ಕೆ ಕಾರಣಗಳು ಹಲವಾರು ಇವೆ. ಮೊದಲನೆಯದಾಗಿ, ಈ ಒಂದು ಏರಿಯಾದಲ್ಲಿ ಅಲ್ಲಲ್ಲಿ ಒಂದೊಂದು ಚೆಕ್ ಡ್ಯಾಂಗಳನ್ನು ನಿರ್ಮಾಣ ಮಾಡಿರುವಂಥದ್ದು, ಎರಡನೆಯದು ಏನೆಂದರೆ, Eucalyptus ಅನ್ನು ನಾವು ಜಾಸ್ತಿ ಬೆಳೆದಿರುವಂಥದ್ದು, ಮತ್ತೆ ನದಿ ಭಾಗ ನಗರ ಪ್ರದೇಶಕ್ಕೆ ಹತ್ತಿರ ಬಂದ ಮೇಲೆ ಕೆಲವು ಕಡೆ encroachment ಆಗಿವೆ. ಆದರೆ, rain fed areaದಿಂದ ನೀರು ಕಡಿಮೆಯಾಗಿರುವುದರಿಂದ Eco–sense survey ಮತ್ತು interception of satellite imaginary and computing rainfall run of relationship. ಸೆಟಲೈಟ್ ಮುಖಾಂತರ ಅದರ ಇಮೇಜನರಿಯನ್ನು ತೆಗೆದುಕೊಂಡು preliminary technical report ಮಾಡಿದ ನಂತರ ಡೀಟೈಲ್ ಸರ್ವೆ ಸಹ ಮಾಡಿದ್ದೇವೆ. ಹೆಸರಘಟ್ಟ, ಕುಮುದ್ವತಿ ಮತ್ತು ಅರ್ಕಾವತಿ ಈ ಮೂರು ಜಲಾಯನ ಪ್ರದೇಶಗಳು ಇಲ್ಲಿ ಮುಖ್ಯವಾಗಿ ಬರುತ್ತವೆ. ಹೆಸರಘಟ್ಟಕ್ಕೆ ಸಂಬಂಧಪಟ್ಟಂತೆ ಈಗ ಸಂಪೂರ್ಣವಾಗಿ ವರದಿ ಬಂದಿದೆ. ಅದೇ ರೀತಿಯಲ್ಲಿ ಕುಮುದ್ವತಿಯದು ಕೂಡ ವರದಿ ಬಂದಿದೆ. ಈ ಎರಡನ್ನು ಪುನಃಶ್ಚೇತನ ಮಾಡುವುದಕ್ಕೆ ಒಂದಕ್ಕೆ 8.10 ಕೋಟಿ ಮತ್ತು ಇನ್ನೊಂದಕ್ಕೆ 7.85 ಕೋಟಿ ರೂಪಾಯಿಯ ಒಂದು ಯೋಜನಾ ವರದಿಯನ್ನು ಈಗಾಗಲೇ ತಯಾರು ಮಾಡಿದ್ದೇವೆ. ಅರ್ಕಾವತಿಯದು ಈ ತಿಂಗಳ ಅಂತ್ಯಕ್ಕೆ

ಸಂಪೂರ್ಣವಾದ ವರದಿ ಬರಲಿದೆ. ಹೆಸರಘಟ್ಟ ಮತ್ತು ಕುಮುದ್ವತಿಗೆ ಸಂಬಂಧಪಟ್ಟ ಕಾಮಗಾರಿಗಳಿಗೆ ಕೂಡಲೇ ಮಂಜೂರಾತಿಯನ್ನು ಮಾಡಿ ಇದೇ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಸದರಿ ಕಾಮಗಾರಿಗಳನ್ನು ಪ್ರಾರಂಭ ಮಾಡುತ್ತೇವೆ. ಮತ್ತೆ ಅರ್ಕಾವತಿಯದು, ಈ ತಿಂಗಳ ಕೊನೆಯೊಳಗೆ ವರದಿ ಬಂದ ತಕ್ಷಣವೇ ತಡಮಾಡದೆ ಇದರ ಜೊತೆಗೆಯೇ ಆ ಕಾಮಗಾರಿಯನ್ನು ಸಹ ಮಾಡುತ್ತೇವೆ. ಇದಕ್ಕೆ ಹೆಚ್ಚಿನ ಹಣ ಬೇಕಾಗುತ್ತದೆ. ಏಕೆಂದರೆ, ಇದರ ಪುನಃಶ್ಚೇತನ ಬಹಳ ಅವಶ್ಯಕತೆ ಇದೆ. ಬೆಳೆಯುತ್ತಿರುವ ನಗರದ ನೀರಿನ ಸವಾಲಿಗೆ ಸ್ವಲ್ಪಮಟ್ಟಿಗಾದರೂ ಅದನ್ನು ಕೊಡುವಂಥ ಅವಶ್ಯಕತೆ ಇದೆ. ಇದಕ್ಕೆ ಎಷ್ಟು ಹಣ ಬೇಕಾಗಿದೆಯೋ ಅದನ್ನು ನಮ್ಮ ಕಾವೇರಿ ನೀರಾವರಿ ನಿಗಮದ ಬಜೆಟ್‌ನಲ್ಲಿ ಒದಗಿಸಿ ಇದರ ಜೊತೆಗೆ ಕಾಮಗಾರಿಯನ್ನು ಪ್ರಾರಂಭ ಮಾಡಬೇಕೆಂಬ ನಿರ್ಧಾರವನ್ನು ಮಾಡಿದ್ದೇವೆ. ಮಾನ್ಯ ಸದಸ್ಯರು encroachment ಬಗ್ಗೆ ವ್ಯಕ್ತಪಡಿಸಿರುವ ಕಳಕಳಿ ಸರಿಯಾಗಿದೆ. 2003ರಲ್ಲಿ ಗೆಜೆಟ್ ನೋಟಿಫಿಕೇಷನ್ ಆಗಿದೆ. ಅಲ್ಲಿನ ಡಿ.ಸಿ.ಯವರಿಗೆ ಈಗಾಗಲೇ ಸ್ಟ್ರಿಕ್ಟ್ ಆದೇಶವನ್ನು ಕೊಟ್ಟಿದ್ದೇವೆ. ಈಗ ಅದನ್ನು ನಾನು ಪುನರ್ ಪರಿಶೀಲನೆ ಮಾಡುತ್ತೇನೆ. ಅಲ್ಲಿ ಅನಧಿಕೃತವಾಗಿ ಒತ್ತುವರಿ ಮಾಡಿಕೊಂಡಿರುವರು ಯಾರೇ ಆಗಿರಲಿ ಅದನ್ನು ತೆಗೆಯುವುದಕ್ಕೆ ಕಟ್ಟುನಿಟ್ಟಿನ ನಿರ್ದೇಶನವನ್ನು ನೀಡುತ್ತೇವೆ. ಮತ್ತೆ ಇಂಥವುಗಳೇನಾದರೂ ಇದ್ದರೆ ಮಾನ್ಯ ಶಾಸಕರು ನನ್ನ ಗಮನಕ್ಕೆ ತಂದರೆ ಅದರ ಬಗ್ಗೆ ಕೂಡ ಗಮನಿಸುತ್ತೇವೆ. ಮತ್ತೆ ಹೆಸರಘಟ್ಟದಿಂದ ತಿಪ್ಪಗೊಂಡನಹಳ್ಳಿ ವಲಯಕ್ಕೆ ಒಳ ಹರಿವಿನ ನೀರು ಬರುವುದಕ್ಕೆ ಏನು ತೊಂದರೆಯಾಗದಿರುವುದಕ್ಕೆ ಅಲ್ಲಿ ಯಾವುದೇ construction activities ಬರಬಾರದೆಂದು ತಾವು ಹೇಳಿದ್ದೀರಿ. ಇದನ್ನೂ ಸಹ ಕಟ್ಟುನಿಟ್ಟಾಗಿ ಮಾಡುವುದಕ್ಕೆ ಎಲ್ಲಾ ರೀತಿಯ ಕ್ರಮವನ್ನು ಜರುಗಿಸುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮೂರನೇ ಹಂತದಲ್ಲಿ ಅಂದರೆ ಮಂಚನಬೆಲೆ ಜಲಾಶಯದಿಂದ ಮುಂದಕ್ಕೆ ನೀರು ಹರಿದು ಹೋಗುವ ಭಾಗದಲ್ಲಿ ಮರಳನ್ನು ಅನಧಿಕೃತವಾಗಿ ತೆಗೆಯತಕ್ಕಂಥ ಕೆಲಸ ಪ್ರಬಲವಾಗಿ ನಡೆಯುತ್ತಿದೆ. ಇದನ್ನು ನಿಮ್ಮಿಂದ ತಡೆಗಟ್ಟುವುದಕ್ಕೆ ಆಗುತ್ತದೆಯೇ?

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಮರಳು ನೀತಿಯನ್ನು ನಾವು ತಂದಿದ್ದೇವೆ. ಅದರ ಅನುಗುಣವಾಗಿ ನದಿ ಮಧ್ಯ ಭಾಗಕ್ಕೆ ಹೋಗಿ ಅನಧಿಕೃತವಾಗಿ ಮರಳನ್ನು ತೆಗೆದು ನದಿ ಪಾತ್ರಕ್ಕೆ ತೊಂದರೆಯಾಗುವಂತ್ತಿದ್ದರೆ ಖಂಡಿತವಾಗಿ ಕ್ರಮ ಜರುಗಿಸುತ್ತೇವೆ.

ಭದ್ರಾವತಿ ತಾಲ್ಲೂಕಿನಲ್ಲಿ ಮೌಲ್ಯಧಾರಿತ ಮರಗಳ ಕಳ್ಳಸಾಗಾಣಿಕೆ

158(1063) ಶ್ರೀ ಸಂಗಮೇಶ್ವರ ಬಿ.ಕೆ (ಭದ್ರಾವತಿ) ಮಾನ್ಯ ಅರಣ್ಯ ಮತ್ತು ಸಣ್ಣ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಭದ್ರಾವತಿ ತಾಲ್ಲೂಕಿನಲ್ಲಿರುವ ಬೀಟೆ, ನೀಲಗಿರಿ, ಸಾಗುವಾನಿ ಮುಂತಾದ ಮರಗಳನ್ನು ಕಳ್ಳ ಸಾಗಾಣಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಇದುವರೆಗೂ ಕ್ರಮ ಕೈಗೊಳ್ಳದಿರಲು ಕಾರಣಗಳೇನು ;

ಇ) ಇಲಾಖೆಯಲ್ಲಿ ಅಧಿಕಾರಿಗಳ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಸಿ.ಹೆಚ್. ವಿಜಯಶಂಕರ್ (ಅರಣ್ಯ ಮತ್ತು ಸಣ್ಣ ಕೈಗಾರಿಕೆ ಸಚಿವರು) :

ಅ) ಹೌದು.

ಆ) ಕಳ್ಳಸಾಗಾಣಿಕೆಯನ್ನು ತಡೆಯಲು ಕ್ರಮ ಕೈಗೊಳ್ಳಲಾಗಿದ್ದು, ಭದ್ರಾವತಿ ತಾಲ್ಲೂಕಿನಲ್ಲಿ ಕಳ್ಳಸಾಗಾಣಿಕೆದಾರರ ಮೇಲೆ ಈಗಾಗಲೇ 2010-11 ನೇ ಸಾಲಿನಲ್ಲಿ ಇದುವರೆವಿಗೂ 65 ಪ್ರಕರಣಗಳಲ್ಲಿ ಅರಣ್ಯ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ. ಭದ್ರಾವತಿ ತಾಲ್ಲೂಕು ಅತಿ ಸೂಕ್ಷ್ಮ ಪ್ರದೇಶವಾಗಿದ್ದು, ತಲೆ ಹೊರೆ ಮತ್ತು ಎತ್ತುಗಳ ಮೂಲಕವೂ ಸಾಗಾಣಿಕೆ ನಡೆಯುತ್ತಿದ್ದು. ಅದನ್ನು ಸಹ ನಿಯಂತ್ರಣದಲ್ಲಿಡಲಾಗಿದೆ. ದಾಖಲಾಗಿರುವ ಅರಣ್ಯ ಮೊಕದ್ದಮೆಗಳ ವಿವರ ಈ ಕೆಳಕಂಡಂತಿದೆ.